12

# ಕೋಳಿ ಕೂಗುವಾಗ

## (ಮತ್ತಾಯ 26:31-75)

ಗ್ರಾಮದ ಸಮೀಪ ವಾಸಿಸುವ ಅನೇಕ ಜನರು ಹುಂಜುವು ಕೂಗುವದನ್ನು ಕೇಳಿರುವರು. ಹೆಮ್ಮೆಯಿಂದ ಪುಕ್ಕಗಳನ್ನು ಆಗಲಿಸಿ, ಗೋಣು ಮೇಲಕ್ಕೆತ್ತಿ ಕೂಗುತ್ತ ಮುಂಜಾವನ್ನು ಸ್ವಾಗತಿಸುವದನ್ನು ನೋಡಿರುವರು. ಹುಂಜವು ಯಾಕೆ ಇದನ್ನು ಮಾಡುತ್ತದೆ ಎಂದು ನನಗೆ ತಿಳಿದಿರುವದಿಲ್ಲ.[1] ಅದು ತನ್ನ ಅತೀ ಚಿಕ್ಕ ಮೆದುಳಿನಲ್ಲಿ ತಾನು ಕೂಗದಿದ್ದರೆ ಸೂರ್ಯನು ಉದಯವಾಗುವದಿಲ್ಲವೆಂದು ನಂಬಿರುವನೋ ಎಂದು ಸಂಶಯ ಪಡುತ್ತೇನೆ.

ನಾನು ಬಾಲಕನಾಗಿದ್ದಾಗ, ಸ್ನೇಹ ಭಾವನೆಗಳಿಂದ ಹುಂಜ ಕೂಗುತ್ತಿರುವದನ್ನು ಕೇಳಿಸಿಕೊಂಡೆನು. ಅದು ದಿನದ ಪ್ರಾರಂಭ ಎಂದು ಅರ್ಥ ಕೊಟ್ಟಿತು. ಅದು ಒಳ್ಳೆಯದೇ. ನನ್ನ ಬೆಚ್ಚಗಿನ ಹಾಸಿಗೆಯಿಂದ ಹೊರಗೆ ಬಂದು ನನ್ನ ದಿನದ ಕಾರ್ಯ ಪ್ರಾರಂಭಿಸಬೇಕೆಂದೂ ಅರ್ಥ ಕೊಟ್ಟಿತು. ಅದು ಇಷ್ಟವಾದದ್ದಾಗಿರಲಿಲ್ಲ.

ಚರಿತ್ರೆಯಲ್ಲಿ ಒಬ್ಬ ಮನುಷ್ಯನಿಗೆ, ಕೋಳಿಕೂಗಿದ ಶಬ್ದವು ಯಾವುದೇ ರೀತಿಯ ಸಂತೋಷವನ್ನು ತರಲಿಲ್ಲ. ಆದರೆ ಆಳವಾದ ದುಃಖವನ್ನು ತಂದಿತು. ಆ ಮನುಷ್ಯನ ಹೆಸರು ಪೇತ್ರನು. ದುಃಖದ ಕಥೆಯ ಮುಕ್ತಾಯವು ಮತ್ತಾಯ 26:73-75ರಲ್ಲಿ ಕಂಡು ಬರುತ್ತದೆ:

> ಸ್ವಲ್ಪ ಹೊತ್ತಿನ ಮೇಲೆ ಅಲ್ಲಿ ನಿಂತವರು ಮುಂದೆ ಬಂದು ಪೇತ್ರನಿಗೆ - ನಿಶ್ಚಯ ವಾಗಿ ನೀನು ಸಹ ಅವರಲ್ಲಿ ಒಬ್ಬನು, ನಿನ್ನ ಭಾಷೆಯೇ ನಿನ್ನನ್ನು (ಗಲಿಲಾಯದ ವನೆಂದು) ತೋರಿಸಿಕೊಡುತ್ತದೆ ಎಂದು ಹೇಳಲಾಗಿ ಅವನು - ಆ ಮನುಷ್ಯನನ್ನು ನಾನರಿಯೆನು ಎಂದು ಹೇಳಿ ಶಾಪಹಾಕಿಕೊಳ್ಳುವದಕ್ಕೂ ಆಣೆಯಿಟ್ಟು ಕೊಳ್ಳುವದಕ್ಕೂ ಪ್ರಾರಂಭಿಸಿದನು. ಕೂಡಲೆ ಕೋಳಿ ಕೂಗಿತು. ಆಗ ಪೇತ್ರನು - ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯೆನೆಂಬುದಾಗಿ ಹೇಳುವಿ ಎಂದು ಯೇಸು ಹೇಳಿದ ಮಾತನ್ನು ನೆನಸಿ ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತನು.

ಪೇತ್ರನ ಅಲ್ಲಗಳೆಯುವಿಕೆಯ ಕಥೆಯನ್ನು ಕೋಳಿ ಕೂಗುವದರ ಮೇಲೆ ಪ್ರಾಮುಖ್ಯತೆ ಕೊಟ್ಟು ಅಧ್ಯಯನ ಮಾಡೋಣ. ನಮ್ಮ ಪಾಠಕ್ಕಾಗಿ ಮತ್ತಾಯ 26ನ್ನು ಉಪಯೋಗಿಸೋಣ. ಅದಕ್ಕೆ ಸಮಾನವಾದ ದಾಖಲೆಗಳಲ್ಲಿಯ ಕೆಲ ವಿವರಣೆಗಳನ್ನೂ ಉಪಯೋಗಿಸೋಣ (ಮಾರ್ಕ 14; ಲೂಕ 22; ಯೋಹಾನ 18). ಪೇತ್ರನಿಗಾಗಿ ಕೋಳಿ ಕೂಗಿದ್ದನ್ನು ಮೊದಲು ನಾವು ಗಮನಿಸೋಣ. ಆಮೇಲೆ ನಮಗಾಗಿ ಕೋಳಿ ಕೂಗುವದನ್ನು ಗಮನಿಸೋಣ.

## ಪೇತ್ರನಿಗಾಗಿ ಕೋಳಿಯು ಕೂಗಿದಾಗ

**ಪ್ರಕಟನೆ ಹಾಗೂ ಪ್ರತಿಭಟನೆಗಳು**

ಮತ್ತಾಯ 26ರಲ್ಲಿ ಯೇಸು ಮೇಲಂತಸ್ತಿನ ಕೋಣೆಯಲ್ಲಿ ತನ್ನ ಶಿಷ್ಯರೊಂದಿಗಿದ್ದನು. ಮುಂದೇನಿರುವುದು ಎಂಬುದು ಆತನಿಗೆ ತಿಳಿದಿತ್ತು. ತನ್ನ ಹಿಂಬಾಲಕರಿಗೆ ಅದರ ಬಗ್ಗೆ ಎಚ್ಚರಿಕೆ ಕೊಡಲು ಪ್ರಯತ್ನಿಸಿದನು, "ಮುನ್ನೆಚ್ಚರಿಕೆ ಅಂದರೆ ಮುಂದಾಗಿ ಶಸ್ತ್ರಧಾರಿಯಾಗಿರುವುದು" ಎಂದು ಹೇಳಲ್ಪಟ್ಟಿದೆ. "ನೀವೆಲ್ಲರೂ ಈ ರಾತ್ರಿ ನನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿಯುವಿರಿ" (ವ. 31ಎ) ಎಂದು ಆತನು ಹೇಳಲು ಪ್ರಾರಂಭಿಸಿದನು. "ಬೀಳುವಿರಿ" (fall) ಎಂಬುದು "ಎಡವಿ ಬೀಳುವಿರಿ" ಎಂದು ಭಾಷಾಂತರಿಸಲ್ಪಟ್ಟ ಗ್ರೀಕ ಪದದ ಭಾಷಾಂತರವಾಗಿದೆ.[2] "ನೀವು ಹಿಂಜರಿದು ಬಿದ್ದು ಹೋಗುವಷ್ಟು ಈ ರಾತ್ರಿ ನನ್ನ ಬಗ್ಗೆ ನೀವು ನಾಚಿಕೆಪಟ್ಟು ಕೊಳ್ಳುವಿರಿ" ಎಂಬಂತೆ ಯೇಸು ಹೇಳಿದನು.

ಆಮೇಲೆ ಯೇಸು ಜೆಕರ್ಯ 13:7ರಿಂದ ಉಲ್ಲೇಖಿಸಿದನು: "ಕುರುಬನನ್ನು ಹೊಡೆಯುವೆನು; ಹಿಂಡಿನ ಕುರಿಗಳು ಚದರಿ ಹೋಗುವವು ಎಂದು ಬರೆದಿದೆಯಲ್ಲಾ" (ವ. 31ಬಿ). ಕುರುಬನನ್ನು ಹೊಡೆಯುವ ವಿಚಾರವು ಯೇಸುವಿನ ಮರಣಕ್ಕೆ ಸಂಬಂಧಿಸಿದೆ. ಕುರಿಗಳನ್ನು ಚದುರಿಸುವುದು ಆತನ ಶಿಷ್ಯರು ಓಡಿ ಹೋಗುವದಕ್ಕೆ ಸಂಬಂಧಿಸಿದೆ.

ಯೇಸು ತನ್ನ ಶಿಷ್ಯರು ತನ್ನನ್ನು ತೊರೆದು ಬಿಡುವರೆಂದು ಸೂಚಿಸುತ್ತಿದ್ದರೂ ಆತನು ಇನ್ನೂ ಅವರನ್ನು ಪ್ರೀತಿಸಿದನು ಮತ್ತು ಸ್ವೀಕರಿಸಿದನು. ವಚನ 32ರಲ್ಲಿ ತನ್ನ ಪುನರುತ್ಥಾನವನ್ನು, ತನ್ನ ಶಿಷ್ಯರೊಂದಿಗೆ ಪುನಃ ಒಂದುಗೂಡುವದನ್ನು ಮುನ್ನೋಡಿದನು. "ಆದರೆ ನಾನು ಜೀವಿತನಾಗಿ ಎದ್ದ ಮೇಲೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುವೆನು."

ಹೀಗಿದ್ದರೂ ಪೇತ್ರನು ಪ್ರೀತಿಯನ್ನೂ ಲಕ್ಷ್ಯಕೊಟ್ಟಿದ್ದನ್ನೂ ಕೇಳಿಸಿಕೊಳ್ಳಲಿಲ್ಲ. ತಾನು ಮತ್ತು ಇತರ ಶಿಷ್ಯರು ಯೇಸುವನ್ನು ಬಿಟ್ಟುಹೋಗುವರು ಎಂಬ ದೂರನ್ನು ಮಾತ್ರ ಅವನು ಕೇಳಿಸಿಕೊಂಡನು. ಅದನ್ನು ಸ್ವೀಕರಿಸಲು ಸಿದ್ಧನಾಗಿರಲಿಲ್ಲ. "ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲು ಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವುದಿಲ್ಲ" ಎಂದು ಪೇತ್ರನು ಆತನಿಗೆ ಹೇಳಿದನು (ವ. 33). "ನೀನು ತಪ್ಪಾಗಿದ್ದೀ; ಈ ಸಲ ಇದನ್ನು ಸರಿಯಾಗಿ ಹೇಳಿಲ್ಲ" ಎಂದು ತನ್ನ ಗುರುವಿಗೆ ಹೇಳುವ ಮೊದಲನೆಯ ಇಲ್ಲವೇ ಕೊನೆಯ ವಿದ್ಯಾರ್ಥಿ ಪೇತ್ರನಾಗಿರಲಿಲ್ಲ.

ಪೇತ್ರನು ಇದೀಗ ಕರ್ತನ ಭೋಜನದ ಸ್ಥಾಪನೆಯಲ್ಲಿ ಒಳಗೊಂಡಿದ್ದನು. ಅವನು ಇತರ ಶಿಷ್ಯರೊಡನೆಯೂ ಕರ್ತನೊಂದಿಗೂ ಅನ್ಯೋನ್ಯತೆಯಲ್ಲಿದ್ದನು. ತಾನು ಬಹಳ ಬಲವುಳ್ಳವನೆಂದು ಯೋಚಿಸಿದನು, "ಅದೆಂದೂ ಸಂಭವಿಸುವದಿಲ್ಲ" ಎಂದು ಅವನು ಒತ್ತಿ ಹೇಳಿದನು.

ಪೇತ್ರನಿಗೆ ಯೇಸು ನೇರವಾಗಿ ಆ ಎಚ್ಚರಿಕೆಯನ್ನು ಪುನರುಚ್ಚರಿಸಿದನು: "ನಿನಗೆ ಸತ್ಯವಾಗಿ ಹೇಳುತ್ತೇನೆ. ಇದೇ ರಾತ್ರಿಯಲ್ಲಿ ಕೋಳಿಕೂಗುವದಕ್ಕಿಂತ ಮುಂಚೆ ನೀನು ನನ್ನ ವಿಷಯದಲ್ಲಿ - ಅವನನ್ನು ಅರಿಯೆನೆಂಬುದಾಗಿ ಮೂರು ಸಾರಿ ಹೇಳುವಿ ಅಂದನು" (ವ. 34). "ಕೋಳಿ ಕೂಗುವದಕ್ಕಿಂತ ಮುಂಚೆ" ಅಂದರೆ "ಮುಂಜಾನೆಯಾಗುವ ಮೊದಲು" ಎಂಬರ್ಥ. ಯೇಸುವು ಹೇಳಿದ್ದು, ಈಗಿನಿಂದ ಮೂರು, ನಾಲ್ಕು ಇಲ್ಲವೇ ಐದು ತಾಸುಗಳಲ್ಲಿ ನೀನು ನನ್ನನ್ನು ಮೂರು ಸಲ ಅಲ್ಲಗಳೆಯುವಿ ಎಂದು ಬೇರೆ ರೀತಿಯಲ್ಲಿ ಹೇಳಬಹುದು.

ಪೇತ್ರ ಅಂಥ ಸಂಗತಿಯನ್ನು ಕಲ್ಪಿಸಲಿಲ್ಲ. ಅದು ಕಪ್ಪು ಬೆಳ್ಳಗಾಗುವುದು, ಮೇಲಿನದು ಕೆಳಗಾಗುವುದು, ಛಳಿ ಕರಗುವುದು ಮತ್ತು ಉಷ್ಣತೆ ಹಿಮಗಟ್ಟುವದು ಎಂದು ಹೇಳುವಂತಿತ್ತು. "ನಾನು ನಿನ್ನ ಸಂಗಡ ಸಾಯಬೇಕಾದರೂ ನಿನ್ನನ್ನು ಅರಿಯೆನೆಂಬುದಾಗಿ ಹೇಳುವದೇ ಇಲ್ಲ" (ವ. 35)! ಎಂದು ಅವನು ಹೇಳಿದನು. ಅದು ನಿಮಗೆ 1 ಕೊರಿಂಥ. 10:12ನ್ನು ಜ್ಞಾಪಕಕ್ಕೆ ತರಬಹುದು: "ಆದ ಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ."

**ವಾಸ್ತವಿಕತೆ ಹಾಗೂ ಪರಿಣಾಮಗಳು**

ಎಚ್ಚರಿಕೆಯನ್ನು ಕೊಟ್ಟ ತರುವಾಯ ಯೇಸುವೂ ಆತನ ಶಿಷ್ಯರೂ ಮೇಲಂತಸ್ತಿನ ಕೋಣೆಯ ಪವಿತ್ರಸ್ಥಳವನ್ನು ಬಿಟ್ಟು "ನಿಜವಾದ ಲೋಕದೊಳಗೆ" ಗೆತ್ಸೆಮನೆ ತೋಟಕ್ಕೆ ಹೋದರು. ಯೇಸು ತನ್ನೊಂದಿಗೆ ಪೇತ್ರ, ಯಾಕೋಬ ಮತ್ತು ಯೋಹಾನರನ್ನು ತೋಟದ ಕೇಂದ್ರಸ್ಥಳಕ್ಕೆ ಕರೆದು ಕೊಂಡು ಹೋದನು. "ಎಚ್ಚರವಾಗಿದ್ದು ಪ್ರಾರ್ಥಿಸಿರಿ" (ವ. 41) ಎಂದು ಅವರಿಗೆ ಹೇಳಿದನು. ಆದರೆ ಅವರು ನಿದ್ರೆ ಹೋದರು. ಆಲಿಸ ಬೇಕಾಗಿದ್ದಾಗ ಮಾತನಾಡಿದರು, ಪೇತ್ರನು ಇಲ್ಲಿ ಪ್ರಾರ್ಥಿಸಬೇಕಾಗಿದ್ದಾಗ ನಿದ್ರಿಸಿದನು. ಅವನು ಬಿದ್ದು ಹೋಗುವದರಲ್ಲಿದ್ದದ್ದು ಆಶ್ಚರ್ಯಕರವಾದದ್ದಾಗಿರುವದಿಲ್ಲ.

ಜನರ ಗುಂಪು ಬಂದಿತು. ಯೂದನು ಮುದ್ದಿನಿಂದ ಯೇಸುವಿನ ಗುರುತು ತೋರಿಸಿದನು. ಪೇತ್ರನು ಸಿದ್ಧವಾಗಿದ್ದನು: ಅವನ ಕತ್ತಿಯು ಹೊರಗೆ ಬಂದಿತ್ತು, ಮಹಾಯಾಜಕನ ಸೇವಕನ ಕಿವಿಯನ್ನು ಅವನು ಕತ್ತರಿಸಿದನು (ವ. 51; ಯೋಹಾನ 18:10). "ಯೇಸು ಅವನ ಕಡೆಗೆ ನೋಡಿ, ನಿನ್ನ ಕತ್ತಿಯನ್ನು ತಿರಿಗಿ ಒರೆಯಲ್ಲಿ ಸೇರಿಸು; ಕತ್ತಿಯನ್ನು ಹಿಡಿದವರೆಲ್ಲರೂ ಕತ್ತಿಯಿಂದ ಸಾಯುವರು" (ವ. 52).

ಪೇತ್ರನ ವಿರೋಧವನ್ನು ಊಹಿಸಿರಿ: "ಕರ್ತನೇ, ಸ್ವಲ್ಪ ತಡೆ, ನಾನು ನಿನಗಾಗಿ ಸಾಯುವೆನೆಂದು ಹೇಳಿದ್ದೇನೆ - ನಾನು ಸಿದ್ಧವಾಗಿದ್ದೇನೆ! ಕರ್ತನೇ ನನ್ನ ಹಿಂದೆ ಬಾ. ನಾನು ನಿನ್ನನ್ನು ಕಾಪಾಡುತ್ತೇನೆ. ಅವರು ನಿನ್ನನ್ನು ಹಿಡಿಯ ಬೇಕಾದರೆ ಮೊದಲು ನನ್ನನ್ನು ಹಿಡಿಯ ಬೇಕು." ಆದರೆ ಯೇಸು, "ಪೇತ್ರನೇ, ನಿನ್ನ ಕತ್ತಿಯನ್ನು ಒರೆಗೆ ಹಾಕು" ಎಂದನು. ಹೀಗೆ ಪೇತ್ರನು ಸತ್ಯಸ್ಥಿತಿಗೆ ಎದುರಾಗಿ ಬಂದನು. ಅವನಿಗೆ ಮಾನವ ಯೋಜನೆಗಳಿದ್ದವು ಆದರೆ ಒಡೆಯನ ಯೋಜನೆ ಇರಲಿಲ್ಲ.

ನಮಗೆ ಹೆಚ್ಚಾಗಿ ಮಾನವ ಯೋಜನೆಗಳು ಇರುತ್ತವಲ್ಲವೇ! ನಮ್ಮನ್ನು ಕಾಪಾಡುವ ಮೂಲಗಳು, ನಮ್ಮ ಸುರಕ್ಷಿತತೆಯ ಸ್ಥಾನಗಳು ಬಹುಶಃ ನಮ್ಮ ಮನೆಗಳೂ ನಮ್ಮ ಆಸ್ತಿಪಾಸ್ತಿಗಳು, ನಮ್ಮ ಕೆಲಸಗಳು, ನಮ್ಮ ಆರೋಗ್ಯ, ಬಲ, ನಮ್ಮ ಮದುವೆಗಳು, ಜೊತೆಗಾರರು, ಮಕ್ಕಳು ಇರಬಹುದು. ಹೀಗಿದ್ದರೂ ಅವು ಫಕ್ಕನೇ ನಮ್ಮಿಂದ ದೂರ ವಾಗಬಹುದು. ಅವಿದ್ದಾಗ ನಾವು ಭದ್ರರಾಗಿರುವೆವು ಎಂದು ಭಾವಿಸುತ್ತೇವೆ. "ನೀನು ನಮಗೇನು ಮಾಡಿದ್ದೀ, ಕರ್ತನೇ?" ಎಂದು ಕೂಗುತ್ತೇವೆ. ತನ್ನ ಮೇಲೆ ಅವಲಂಭಿಸಿರ ಬೇಕೆಂಬುದನ್ನು ನಮಗೆ ಕಲಿಸಲು ಕರ್ತನು ಬಯಸುತ್ತಿರಬಹುದು.

ಪೇತ್ರನ ಸ್ವಾಭಿಮಾನವು ಜಜ್ಜಲ್ಪಟ್ಟಿತು. ಯೇಸುವಿನಿಂದ ಅವನು ಬಹಿರಂಗವಾಗಿ ಗದರಿಸಲ್ಪಟ್ಟನು.

ಪೇತ್ರನಿಗಾಗಿ ವಾಸ್ತವಿಕತೆಯು ಉದಯವಾಗಲು ಪ್ರಾರಂಭಿಸಿತು. ಜನರ ಗುಂಪಿನಿಂದ ಯೇಸುವು ಒಯ್ಯಲ್ಪಟ್ಟನು. ಯೇಸು ಮುಂತಿಳಿಸಿದಂತೆ, "ಆಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು" (ವ. 56ಬಿ).

> ಯೇಸುವನ್ನು ಹಿಡಿದವರು ಆತನನ್ನು ಮಹಾ ಯಾಜಕನಾದ ಕಾಯಫನ ಬಳಿಗೆ ತೆಗೆದು ಕೊಂಡು ಹೋದರು. ಅಲ್ಲಿ ಶಾಸ್ತ್ರಿಗಳೂ ಹಿರಿಯರೂ ಕೂಡಿ ಬಂದಿದ್ದರು. ಪೇತ್ರನಾದರೋ ದೂರದಿಂದ ಆತನ ಹಿಂದೆ ಹೋಗುತ್ತಾ ಮಹಾಯಾಜಕನ ಮಠದ ಅಂಗಳದ ತನಕ ಬಂದು ಒಳಗೆ ಹೊಕ್ಕು ಆತನ ಗತಿ ಏನಾಗುವದೋ ನೋಡಬೇಕೆಂದು ಓಲೆಕಾರರ ಸಂಗಡ ಕೂತುಕೊಂಡನು (57, 58 ವಚನಗಳು).

ಯೋಹಾನನೂ ಸಹ ಜನರ ಗುಂಪನ್ನು ಹಿಂಬಾಲಿಸಿ ಕೊಂಡು ಮಹಾಯಾಜಕನ ಮನೆಗೆ ಹೋದನೆಂದು ಇನ್ನೊಂದು ದಾಖಲೆ ಹೇಳುತ್ತದೆ (ಯೋಹಾನ 18:15).

ಯೇಸು ತನ್ನ ಶಿಷ್ಯರೊಂದಿಗೆ ಬಂದ ಮಾರ್ಗದಲ್ಲಿಯೇ ಜನಸಮೂಹವು ತೋಟದಿಂದ ಹೊರಗೆ ಕಿದ್ರೋನ ಕೊಳ್ಳದ ಮಾರ್ಗವಾಗಿ ಮಹಾಯಾಜಕನ ಮನೆಗೆ ಬರುವವರೆಗೆ ಪಟ್ಟಣಕ್ಕೆ ಹಿಂದಿರುಗಿತು. ಮಹಾಯಾಜಕನಿಗೆ ಯೋಹಾನನ ಪರಿಚಯ ವಿತ್ತು. ಆದುದರಿಂದ ಅವನು ಒಳಗೆ ಬಿಡಲ್ಪಟ್ಟನು. ಆಮೇಲೆ ಅವನು ಪೇತ್ರನನ್ನು ಒಳಗೆ ಕರೆದುಕೊಂಡು ಬಂದನು (ಯೋಹಾನ 18:16).

ಎಲ್ಲಾ ಕಟ್ಟಡಗಳ ಮಧ್ಯದಲ್ಲಿರಬಹುದಾದ ಅಂಗಳದೊಳಗೆ ಪೇತ್ರನು ಹೋದನು. ಛಳಿಗಾಲದ ರಾತ್ರಿಯ ಛಳಿ ಕಾಯಿಸಿಕೊಳ್ಳಲು ಚಿಕ್ಕ ಬೆಂಕಿಯು ಹೊತ್ತಿಸಲ್ಪಟ್ಟಿತ್ತೆಂದು ಬೇರೆ ವಿವರಣೆಗಳು ಹೇಳುತ್ತವೆ. ಪೇತ್ರನು ತಾನು ಅಲ್ಲಿಯವನೇ ಎಂಬಂತೆ ಪ್ರಯತ್ನಿಸುತ್ತ ತನ್ನನ್ನು ಕಾಯಿಸಿಕೊಳ್ಳುತ್ತ ಕುಳಿತನು. "ಏನಾಗುವುದೋ ನೋಡುವದಕ್ಕಾಗಿ" ಅವನು ಹೋದನೆಂದು ಮತ್ತಾಯ 26:58 ಹೇಳುತ್ತದೆ. ತೆರೆದ ಬಾಗಿಲು ಕಿಟಕಿಗಳ ಮೂಲಕ ನ್ಯಾಯವಿಚಾರಣೆಯನ್ನು ನೋಡ ಬಹುದಿತ್ತು.

ನಾವು ಮುಂದೆ ಹೋಗುವ ಮೊದಲು, ಸಿಂಹದ ಗವಿಯಂತಿದ್ದ ಅಂಗಳದೊಳಗೆ ಬೇರೆ ಶಿಷ್ಯರು ಇಲ್ಲದಿರುವದನ್ನು ಗಮನಿಸಿರಿ. ಯೋಹಾನನನ್ನು ಬಿಟ್ಟು[3] ಉಳಿದವರೆಲ್ಲರೂ ಚದರಿಹೋಗಿದ್ದರು. ಅದುದರಿಂದ ಧೈರ್ಯಕ್ಕಾಗಿಯು ಸಮರ್ಪಣೆಗಾಗಿಯೂ ಪೇತ್ರನನ್ನು ಮೆಚ್ಚಿಕೊಳ್ಳೋಣ.

ಪೇತ್ರನನ್ನು ಯೋಹಾನನನ್ನು ಒಳಗೆ ಬರಲು ಬಿಟ್ಟ ಒಬ್ಬ ದಾಸಿಯ ವ್ಯಕ್ತಿರೂಪದಲ್ಲಿ ನಿಜತ್ವವು ಬಂದು ಅಪ್ಪಳಿಸಿತು (ಯೋಹಾನ 18:17). ಚಿಕ್ಕ ಬಾಲಕಿಯು ಈ ದೊಡ್ಡ, ಬಲವಾದ ಬೆಸ್ತನಿಗೆ, "ನೀನು ಸಹ ಗಲಿಲಾಯದ ಯೇಸುವಿನ ಕೂಡ ಇದ್ದವನು" (ವ. 69) ಎಂದು ಹೇಳುತ್ತ ಬಂದಳು. ಪೇತ್ರನಿಗೆ ಬಿಸಿತಟ್ಟಿತ್ತು: ಬೆಂಕಿಯಿಂದಲ್ಲ ಆದರೆ ಜನ ಸಮೂಹದಿಂದ. ಬಲಶಾಲಿ ಮನುಷ್ಯನು ಚಿಕ್ಕ ಬಾಲಿಕೆಯ ಮುಂದೆ ಕುಸಿದು ಬಿದ್ದನು: "ಅಲ್ಲ, ನೀನು ಏನನ್ನುತ್ತೀಯೋ ನನಗೆ ಗೊತ್ತಿಲ್ಲ ಎಂದು ಎಲ್ಲರ ಮುಂದೆ ಹೇಳಿದನು" (ವ. 70). ಮೊದಲನೆಯ ಅಲ್ಲಗಳೆಯುವಿಕೆ ಸಂಭವಿಸಿತು.

ಪೇತ್ರನು ಹಿಂಜರಿದನು. ಅವನು ಬೆಂಕಿಯನ್ನು ಬಿಟ್ಟು ಕತ್ತಲೆ ಯೊಳಗೆ ಬಾಗಿಲಿನ ಕಡೆಗೆ ಹೋದನು.[4] ಆದರೂ ತಪ್ಪಿಸಿಕೊಂಡು ಹೋಗಲಿಲ್ಲ. ಇನ್ನೊಬ್ಬ ದಾಸಿ ಅಲ್ಲಿ ಅವನನ್ನು ಕಂಡಳು. "ಇವನೂ ನಜರೇತಿನ ಯೇಸುವಿನ ಕೂಡ ಇದ್ದವನು ಎಂದು ಹೇಳಿದಳು" (ವ. 71). ಎಲ್ಲಾ ವಿವರಣೆಗಳನ್ನು ಒಂದು ಗೂಡಿಸುವಾಗ, ಈ ಹಂತದಲ್ಲಿ ಹಲವಾರು ಜನರು ಒಂದುಗೊಡಿರುವುದು ಕಂಡು ಬರುತ್ತದೆ. ಕನಿಷ್ಠ ಪಕ್ಷ ಇಬ್ಬರು ಕೂಡಲೇ, "ಅದು ಸರಿ, ಅವನು ನಜರೇತಿನ ಯೇಸುವಿನೊಂದಿಗಿದ್ದನು" ಎಂದು ಧ್ವನಿಗೂಡಿಸಿದರು.

ಬಹುಶಃ ಪೇತ್ರನಿಗೆ ಬೆವರುವುದು ಪ್ರಾರಂಭವಾಯಿತು. "ಅವನು ತಿರಿಗಿ - ಅಲ್ಲ, ಆ ಮನುಷ್ಯನನ್ನು ನಾನರಿಯೆನು ಎಂದು ಆಣೆಯಿಟ್ಟು ಕೊಂಡು ಹೇಳಿದನು" (ವ. 72).

ಆ ಸಮಯದಲ್ಲಿ "ಆಣೆಯಿಟ್ಟು ಕೊಳ್ಳುವುದು," ನಾವು ಭ್ರಷ್ಟತೆ ಎಂದು ಕರೆಯುವದಕ್ಕೆ ಸಂಬಂಧಿಸಿರಲಿಲ್ಲ. ಆದರೆ ಯೆಹೂದ್ಯರಿಂದ ಸಾಮಾನ್ಯವಾಗಿ ಉಪಯೋಗಿಸಿದ ಆಣೆಗೆ ಸಂಬಂಧಿಸಿತ್ತು. ತಾನು ಹೇಳಿದ್ದು ಸತ್ಯವೆಂದು ಅವನು ಶಪಥ ಮಾಡಿದನು. ಇದು ಅವನು ಎರಡನೆಯ ಸಲ ಅಲ್ಲಗಳೆದದ್ದಾಗಿತ್ತು.

**ದುಃಖದ ಸಂಗತಿ ಹಾಗೂ ಕಣ್ಣೀರು**

ಪೇತ್ರನ ಬಲವಾದ ಅಲ್ಲಗಳೆಯುವಿಕೆಗಳು ನಾವು ಅತಿಯಾಗಿ ಭಯ ಪಟ್ಟದ್ದರಲ್ಲಿ ಪರಿಣಮಿಸಿತು. ಅವು ತನ್ನನ್ನೇ ಗಮನಿಸಿಕೊಳ್ಳುವಂತೆ ಅವನನ್ನು ಮಾಡಿದವು. ಚಿಕ್ಕಗುಂಪು ಕೂಡಿತ್ತು ಅವರಲ್ಲಿ ಒಬ್ಬನು ಪೇತ್ರನು ಕಿವಿ ಕತ್ತರಿಸಿದ ಮನುಷ್ಯನ ಸಂಬಂಧಿ. "ನಿಶ್ಚಯವಾಗಿ, ನೀನು ಸಹ ಅವರಲ್ಲಿ ಒಬ್ಬನು, ನಿನ್ನ ಭಾಷೆಯೇ ನಿನ್ನನ್ನು ತೋರಿಸುತ್ತದೆ" (ವ. 73) ಎಂದು ಅವನು ಹೇಳಿದನು.

ಗಲಿಲಾಯದವರ ಆಡು ಭಾಷೆ ಬೇರೆಯಾಗಿತ್ತು. ಶಬ್ದಗಳ ಉಚ್ಚಾರಣೆ ಭಿನ್ನವಾಗಿತ್ತು. ಅನೇಕ ಶಬ್ದಗಳನ್ನು ಒಂದೇ ರೀತಿಯಾಗಿ ಉಚ್ಚರಿಸುತ್ತಿದ್ದರು; ಕೆಲವನ್ನು ಉಚ್ಚರಿಸುತ್ತಿದ್ದಿಲ್ಲ. ಅವರ ಉಚ್ಚಾರಣೆಯು ಇತರ ಯೆಹೂದ್ಯರಿಗೆ ಅಸಹ್ಯವಾಗಿತ್ತು. ಯೆಹೂದ್ಯರ ಸಭಾಮಂದಿರಗಳಲ್ಲಿ ಗಲಿಲಾಯದವರು ಆಶೀರ್ವಚನ ಹೇಳಲು ಅಪ್ಪಣೆ ಹೊಂದಿರಲಿಲ್ಲ. ಹೀಗೆ ಪೇತ್ರನು ತನ್ನ ಬಾಯಿ ತೆರೆದಾಗಲೆಲ್ಲಾ ಅವನ ಮಾತುಗಳಿಂದ ಅವನ್ಯಾರೆಂದು ಪ್ರಕಟಿಸುತ್ತಿದ್ದವು.

"ಆಗ ಅವನು - ಆ ಮನುಷ್ಯನನ್ನು ನಾನರಿಯೆನು ಎಂದು ಹೇಳಿ ಶಾಪಹಾಕಿಕೊಳ್ಳುವದಕ್ಕೂ ಆಣೆಯಿಟ್ಟು ಕೊಳ್ಳುವದಕ್ಕೂ ಪ್ರಾರಂಭಿಸಿದನು!" (ವ. 74ಎ). ಹೀಗೆ ಪೇತ್ರನು ಸಾಮಾನ್ಯ ಆಣೆಯಂತೆ-ಬೆಸ್ತರ ಕೆಟ್ಟ ಮಾತುಗಳನ್ನು ಸೇರಿಸಿದನು. "ಇಲ್ಲ, ಇಲ್ಲ, ಇಲ್ಲ, ಅವನಾರೆಂದು ನನಗೆ ಗೊತ್ತಿಲ್ಲ!" ಎಂದು ಪೇತ್ರನು ಕೂಗುತ್ತಿದ್ದನು. ಹೀಗೆ ಅವನು ಮೂರನೆಯ ಸಲ ಅಲ್ಲಗಳೆದನು.

ಈ ಹಂತದಲ್ಲಿ, "ಸ್ವಾಮಿಯು ಹಿಂದಿರುಗಿಕೊಂಡು ಪೇತ್ರನನ್ನು ದೃಷ್ಟಿಸಿ ನೋಡಿದನು" (ಲೂಕ 22:61) ಎಂಬ ಮಾತುಗಳನ್ನು ಲೂಕನು ಕೂಡಿಸಿದ್ದಾನೆ. ಬಹುಶಃ ಯೇಸು ಬಾಗಿಲಿನಿಂದ ಇಲ್ಲವೇ ಕಿಟಕಿಯ ಮೂಲಕ ನೋಡಿರಬಹುದು. ಇಲ್ಲವೇ ನ್ಯಾಯವಿಚಾರಣೆ ಮುಂದುವರಿದಂತೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆಸುತ್ತಿರುವಾಗ ನೋಡಿರ ಬಹುದು. ಸಂದರ್ಭ ಯಾವುದೇ ಇರಲಿ ಯೇಸು ತನಗೆ ಸಂಭವಿಸುತ್ತಿದ್ದ ಎಲ್ಲದರಲ್ಲಿ ಪೇತ್ರನಿಗೆ ಏನು ಸಂಭವಿಸುತ್ತಿತ್ತೆಂಬುದನ್ನೂ ತಿಳಿದಿದ್ದನು.

ತಾನು ಮಾಡಿದ್ದು ಏನು ಎಂಬುದನ್ನು ತಿಳಿದು ಕೊಂಡಾಗ ಪೇತ್ರನ ಪ್ರತಿಕ್ರಿಯೆಯನ್ನು ಗಮನಿಸಿರಿ: "ಕೂಡಲೇ ಕೋಳಿ ಕೂಗಿತು ... ಹೊರಗೆ ಹೋಗಿ (ಅಪರಾಧದ ದೃಶ್ಯವನ್ನು ಬಿಟ್ಟು) ಬಹು ವ್ಯಥೆಪಟ್ಟು ಅತ್ತನು" (74ಬಿ, 75ಬಿ ವಚನಗಳು).

ನಮ್ಮ ಪಾಠದ ಎರಡನೆಯ ಭಾಗಕ್ಕೆ ತಿರುಗುವಾಗ ಈ ದೃಶ್ಯವನ್ನು ಮನಸ್ಸಿನಲ್ಲಿಟ್ಟು ಕೊಳ್ಳಿರಿ.

## ನಮಗಾಗಿ ಕೋಳಿ ಕೂಗುವಾಗ

ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುವುದು ಬೇಡ. ಪೇತ್ರನು ನಿಂತಿರುವಲ್ಲಿ ನಾವು ನಿಂತಿರುವೆವು. "ಮೋಶೆ ನಿಂತಲ್ಲಿ ನಾನು ನಿಂತಿರುವೆನು" ಎಂದು ಕರೆಯಲ್ಪಟ್ಟ ಪ್ರಸಂಗ ದಿವಂಗತ ಫ್ರೆಡ್ ಮಕ್ಲುಂಗ ಅವರದು. ಅದರಲ್ಲಿ ಅವರು ಚಲನ ಚಿತ್ರ ಕಂಪ್ರಾಕ್ಟನ್ನು

ಬಿಟ್ಟು ಕೊಟ್ಟದ್ದನ್ನು ವಿವರಿಸಿದ್ದಾರೆ. ಫರೋಹನ ಆಸ್ಥಾನವನ್ನು ಬಿಟ್ಟುಕೊಟ್ಟು ಮೋಶೆಯಂತೆ ಫ್ರೆಡ್ ಅವರು ಸೇವೆಯ ಜೀವನ ನಡಿಸಲು ಕೀರ್ತಿಯನ್ನೂ ಅದೃಷ್ಟವನ್ನೂ ತಿರಸ್ಕರಿಸಿದರು. ಫ್ರೆಡ್ ಅವರಾಗಲೀ, ಮೋಶೆಯಾಗಲೀ ನಿಂತಸ್ಥಳದಲ್ಲಿ ನಾವು ನಿಂತುಕೊಂಡಿರಲಿಕ್ಕಿಲ್ಲ. ಆದರೆ ಪೇತ್ರನು ನಿಂತ ಸ್ಥಳದಲ್ಲಿ ನಿಂತು ಕೊಂಡಿದ್ದೇವೆ.

ಆರಾಧನೆಯಲ್ಲಿ ನಾವಿರುವಾಗ "ನಾನು ನಿನ್ನವ ಪ್ರಿಯ ಕರ್ತನೆ" ಎಂಬ ಗೀತೆ ಹಾಡುವಾಗ ನಮ್ಮಲ್ಲಿ ಬಲವಾದ ಭಾವನೆಯಾಗುತ್ತದೆ. ನಾವು ಜೊತೆ ಕ್ರೈಸ್ತರೊಂದಿಗಿದ್ದೇವೆ ಮತ್ತು ಅಭೇಧ್ಯರಾಗಿದ್ದೇವೆ ಎಂದು ಯೋಚಿಸುತ್ತೇವೆ. ನಾವು ಎಂದಾದರೂ ಕ್ರಿಸ್ತನನ್ನು ಅಲ್ಲಗಳೆಯುವೆವೋ ಎಂದು ಕೇಳಿದರೆ "ಎಂದಿಗೂ ಇಲ್ಲ" ಎಂದು ಉತ್ತರ ಕೊಡುತ್ತೇವೆ. ಆಮೇಲೆ ನಾವು "ನಿಜವಾದ ಲೋಕದೊಳಗೆ" ಹೇಗುತ್ತೇವೆ. ಶೋಧನೆಗಳು ನಮ್ಮನ್ನು ಶೋಧಿಸುವಾಗ, ಜನ ಸಮೂಹ ನಮ್ಮ ಸುತ್ತ ಗುಂಪು ಕೂಡುವಾಗ ಸಮಾನ ವರ್ಗದವರ ಒತ್ತಡ ನಮ್ಮ ಮೇಲೆ ಬೀಳುವಾಗ ಅದೊಂದು ಭಿನ್ನಕಥೆಯೇ ಆಗುವದು.

ಇತ್ತೀಚೆಗೆ, ಸಮಾನ ವರ್ಗದ ಒತ್ತಡವು ಜನರಿಗೆ ಏನು ಮಾಡುತ್ತದೆ ಎಂಬುದರ ಹಲವಾರು ದೃಷ್ಟಾಂತಗಳನ್ನು ಓದಿದ್ದೇನೆ. ಒಬ್ಬ ಕಿವುಡ ಬಾಲಕನು ತಾನು ಭಿನ್ನವಾಗಿ ಕಾಣಿಸಬಾರದೆಂದು ಕೇಳುವ ಉಪಕಾರಣವನ್ನು ಧರಿಸುವದನ್ನು ಬಿಟ್ಟುಬಿಟ್ಟಿದ್ದಾನೆ. ಹೆಚ್ಚಾದ ಕುರುಡತ್ವವುಳ್ಳ ಬಾಲಕಿ ಜನರು ತನ್ನ ಪರಿಸ್ಥಿತಿಯನ್ನು ಕಾಣಬಾರದೆಂದು ಬಯಸುತ್ತಾಳೆ. ಹಾಗೂ ಗೋಡೆಗಳಿಗೆ, ಫರ್ನಿಚರುಗಳಿಗೆ ಹಾಯುವದರಿಂದ ತನಗೆ ನೋವು ಮಾಡಿಕೊಳ್ಳುತ್ತಾಳೆ. ಪ್ರಯೋಗ ವೊಂದರಲ್ಲಿ ಹರೆಯದ ಹುಡುಗರು ಚಿಕ್ಕ ಗೆರೆಯು ಅತಿ ಉದ್ದವಾದ ಗೆರೆಯಾಗಿತ್ತೆಂದು ಹೇಳಿದರು. ಇದಕ್ಕೆ ಅವರು ಕೊಡುವ ಕಾರಣ ಕೆಲ ಹದಿಹರೆಯದವರು ಈ ರೀತಿ ಅಭಿಪ್ರಾಯ ಪಟ್ಟಿರುವುದೇ ಆಗಿದೆ. "ಅವರು ಹದಿವಯಸ್ಕರಲ್ಲವೇ!" ಎಂದು ಯಾರಾದರೂ ಹೇಳಬಹುದು. ಇಲ್ಲ, ಇದು ನಮ್ಮೆಲ್ಲರಿಗೂ ಸತ್ಯವಾಗಿದೆ. ವಿನೋದಕರವಾದದ್ದೆಂದು ನೀವು ಯೋಚಿಸದಿದ್ದರೂ ಬೇರೆಯವರು ನಗುತ್ತಿದ್ದುದರಿಂದ ನೀವು ಒಂದು ಹಾಸ್ಯದ ಬಗ್ಗೆ ನಗಲಿಲ್ಲವೋ?

ನಮ್ಮ ಒಳ್ಳೇ ಉದ್ದೇಶವನ್ನು ಸತ್ಯವು ಅಪ್ಪಳಿಸುವಾಗ ಬಹಳ ಸಲ ನಾವು ಕ್ರಿಸ್ತನನ್ನು ಅಲ್ಲಗಳೆಯುತ್ತೇವೆ. ಮಾತುಗಳಿಂದ, ಕೃತಿಗಳಿಂದ, ಇಲ್ಲವೇ ನಾವು ಮಾತಾಡ ಬೇಕಾಗಿರುವಾಗ ಮೌನವಾಗಿರುವದರಿಂದ ನಾವು ಆತನನ್ನು ಅಲ್ಲಗಳೆಯಬಹುದು. ಕೆಲವು ಸಲ ನಾವು ಒಮ್ಮೆ ಮಾತ್ರವೇ ಆತನನ್ನು ಅಲ್ಲಗಳೆಯುವದಿಲ್ಲ, ಮನಸ್ಸಾಕ್ಷಿಯ ಚುಚ್ಚುವಿಕೆಯಿಲ್ಲದೇ ಪುನಃ ಪುನಃ ಅಲ್ಲಗಳೆಯುತ್ತೇವೆ.

ಸ್ವಲ್ಪ ಸಮಯದ ವರೆಗೆ ನಾವು ಮನಸ್ಸಾಕ್ಷಿಯನ್ನು ಹೇಗೆ ಮೌನವಾಗಿರಿಸಬಹುದೆಂಬುದು ಆಶ್ಚರ್ಯಕರವಾದದ್ದಾಗುತ್ತದೆ. ಆಸನ ಪಟ್ಟಿಗಳು ಮೊದಲು ಹೊರಗೆ ಬಂದಾಗಿನ ಸಮಯ ಜ್ಞಾಪಿಸಿಕೊಳ್ಳಿರಿ. ಪ್ರಯಾಣಿಕರು ತಮ್ಮ ಆಸನ ಪಟ್ಟಿಗಳನ್ನು ಕಟ್ಟಿಕೊಳ್ಳಬೇಕೆಂದು ಜ್ಞಾಪಿಸಲು ಅನೇಕ ಕಾರುಗಳಲ್ಲಿ ಶಬ್ದಮಾಡುವ ತಂತ್ರವಿತ್ತು. ಆಸನ ಪಟ್ಟಿಗಳನ್ನು ಕಟ್ಟಿಕೊಳ್ಳದಿದ್ದರೆ ಶಬ್ದಮಾಡುವಂಥವುಗಳು ಗಲಾಟೆ ಮಾಡುತ್ತಿದ್ದವು. ಅವರಿಗೆ ಆಸನಪಟ್ಟಿ ಕಟ್ಟಿಕೊಳ್ಳುವ ಉದ್ದೇಶ ವಿರಲಿಲ್ಲ. ಹಾಗೂ ಶಬ್ದಮಾಡುವಂಥವುಗಳು ಅವರಿಗೆ ಉಪದ್ರವ ಕೊಡುವದನ್ನು ಅವರು ಬಯಸಲಿಲ್ಲ. ಹೀಗೆ ಅವರು ಅವು ಕಾರ್ಯಮಾಡದಂತೆ ನಿಲ್ಲಿಸಿಬಿಡುತ್ತಿದ್ದರು. ನಮ್ಮಲ್ಲಿ ಕೆಲವರು ಮನಸ್ಸಾಕ್ಷಿಯನ್ನು ಅದೇ ರೀತಿಯಲ್ಲಿ ನಡಿಸಿಕೊಳ್ಳುತ್ತೇವೆ. ಮನಸ್ಸಾಕ್ಷಿಯು ದೇವರು ಎಚ್ಚರಿಸುವ ಅತೀ ಮಹತ್ವದ ಸಾಧನಗಳಲ್ಲಿ ಒಂದಾಗಿರುವುದು. ಆದರೆ ನಾವು ಅದನ್ನು ಇಷ್ಟಪಡುವದಿಲ್ಲ. ಆದುದರಿಂದ ಅದನ್ನು ಅಲಕ್ಷಿಸುತ್ತೇವೆ. ನಾವು ಅದನ್ನು "ಬಂದು ಮಾಡಿ" ನಮ್ಮ ಮಾರ್ಗದಲ್ಲಿ ಹೋಗುತ್ತೇವೆ.

ಅಂದರೆ, ಕೋಳಿ ಕೂಗುವವರೆಗೆ - ನಮ್ಮ ಪಾಪವನ್ನು ನಮ್ಮ ಜ್ಞಾಪಕಕ್ಕೆ ತರುವಂತೆ ಏನಾದರೂ ಸಂಭವಿಸುವವರೆಗೆ ನಾವು ನಮ್ಮ ಮಾರ್ಗದಲ್ಲಿಯೇ ಹೋಗುತ್ತೇವೆ. ಒಂದು ವೇಳೆ ಅದು ನಮ್ಮ ಸ್ನೇಹಿತನಾಡಿದ ಒಂದು ಮಾತಾಗಿರಬಹುದು, ಅದು ಸತ್ಯವೇದದ ತರಗತಿ, ಒಂದು ಪ್ರಸಂಗ, ಒಂದು ಹಾಡು ಇಲ್ಲವೇ ಒಂದು ಪ್ರಾರ್ಥನೆಯಾಗಿರಬಹುದು. ಅದು ಆರೋಗ್ಯವನ್ನು ಕಳೆದು ಕೊಳ್ಳುವದಾಗಿರಬಹುದು. ಹಣಕಾಸಿನ ದಿವಾ ಳಿತನವಾಗಿರಬಹುದು. ಕುಟುಂಬದ ಸಮಸ್ಯೆಯಾಗಿರಬಹುದು. ನಮ್ಮ ಸುತ್ತಲೂ ಜಗತ್ತು ಬಿದ್ದು ಹೋಗುತ್ತಿರುವುದಾಗಿರಬಹುದು.

ಜನರನ್ನು "ಎಚ್ಚರಿಸಿದ" ಅನೇಕ ಭಿನ್ನವಾದ "ಕೋಳಿಗಳನ್ನು" ಸತ್ಯವೇದವು ನಮಗೆ ಹೇಳುತ್ತದೆ. ಅದು ಆದಾಮ ಹವ್ವರಿಗೆ ದೇವರು ತೋಟದಲ್ಲಿ ನಡೆದಾಡಿದಂತೆ ದೇವರ ವಾರ್ತೆಯಾಗಿತ್ತು. ದಾವೀದನಿಗೆ "ನೀನೇ ಆ ಮನುಷ್ಯನು!" ಎಂದು ಒಬ್ಬ ಸ್ನೇಹಿತನು ಹೇಳಿದ್ದಾಗಿತ್ತು. ಯೋನನಿಗೆ ಅವನು ಬಯಸದೇ ಇದ್ದ ಮೀನಿನ ಹೊಟ್ಟೆಯೊಳಗೆ ಇರುವಂಥದ್ದಾಗಿತ್ತು. ತಪ್ಪಿಹೋದ ಮಗನಿಗೆ ಹಂದಿಗಳ ಹಿಂಡಿನ ಮಧ್ಯದಲ್ಲಿ ಹಸಿವೆಯ ಬಾಧೆಯಾಗಿತ್ತು. ಅದು ಯಾವುದೇ ಆಗಿರಬಹುದು.

ಅದು ಯಾವುದೇ ಆಗಿದ್ದರೂ ಕೋಳಿ ಕೂಗುವುದು. ದೂರು ಹೇಳುವ ಮನಸ್ಸಾಕ್ಷಿಯು ನಮ್ಮ ಮೇಲೆ ಒತ್ತಡ ತರುತ್ತ, "ಅಪರಾಧಿ, ಅಪರಾಧಿ!" ಎಂದು ಹೇಳುವುದು. "ನಾವೇನು ಮಾಡಿದ್ದೇವೆ? ನಾವು ಹೇಗೆ ಇದನ್ನು ಮಾಡಿರುವ ಸಾಧ್ಯತೆಯಿದೆ? ದೇವರಿಂದ ಅಷ್ಟು ದೂರ ಹೋಗಲು ನಮ್ಮನ್ನು ನಾವು ಯಾಕೆ ಬಿಟ್ಟಿದ್ದೇವೆ?" ಎಂದು ಕೂಗುತ್ತ ಪ್ರತಿಕ್ರಿಯೆ ತೋರಿಸುವೆವು.

ಕೋಳಿ ಕೂಗುವಾಗ ಮೂರು ಪ್ರತಿಕ್ರಿಯೆ ತೋರಿಸುವ ಸಮಯವಾಗಿರುವುದು.

**ಜ್ಞಾಪಿಸಿಕೊಳ್ಳುವದಕ್ಕಾಗಿ ಒಂದು ಸಮಯ**

ಮೊದಲನೆಯದು, ಅದು ಜ್ಞಾಪಿಸಿಕೊಳ್ಳುವದಕ್ಕಾಗಿದ್ದ ಸಮಯವಾಗಿರುವುದು. ನಮ್ಮ ವಚನವು, "ಆಗ ಪೇತ್ರನು ಯೇಸು ಹೇಳಿದ ಮಾತನ್ನು ನೆನಸಿಕೊಂಡನು" (ವ. 75ಎ).

ನಾವು ಚೆನ್ನಾಗಿ ಕಲಿಸಲ್ಪಟ್ಟಿದ್ದೇವೆ. ಹೇಗೆ ಜೀವಿಸ ಬೇಕೆಂಬುದನ್ನು ತಿಳಿದು ಕೊಂಡಿದ್ದೇವೆ. ಹೇಗೆ ವರ್ತಿಸಬೇಕೆಂಬುದನ್ನು ತಿಳಿದಿದ್ದೇವೆ. ಹೀಗಿದ್ದರೂ ಕೆಲವೊಂದು ಕಾರಣಗಳಿಂದ ನಮಗೆ ಕಲಿಸಲ್ಪಟ್ಟದೆಲ್ಲವನ್ನೂ ನಮ್ಮ ಮನಸ್ಸುಗಳಿಂದ ಹೊರಗೆ ಹಾಕಿಬಿಡುತ್ತೇವೆ. ಈಗ ಇದು ಜ್ಞಾಪಿಸಿಕೊಳ್ಳುವ ಸಮಯವಾಗಿದೆ.

ಜ್ಞಾಪಿಸಿಕೊಳ್ಳುವುದು ಮಹತ್ವದ್ದಾಗಿದೆ. ತಪ್ಪಿಹೋದ ಮಗನು ತನ್ನ ತಂದೆಯ ಮನೆಯನ್ನು ಜ್ಞಾಪಿಸಿಕೊಂಡನು. "ಆದದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೋ" (ಪ್ರಕಟನೆ 2:5) ಎಂದು ಯೇಸು ಎಫೆಸದ ಸಭೆಗೆ ಹೇಳಿದನು.

ನೀವು ಯಾವುದನ್ನು ಜ್ಞಾಪಿಸಿಕೊಳ್ಳತಕ್ಕದ್ದು? ತನ್ನ ಶಿಷ್ಯರು ಚದರಿ ಹೋಗುವರು ಎಂಬುದನ್ನು ಮಾತಾಡುತ್ತಿರುವಾಗಲೂ ಯೇಸುವು ತನ್ನ ಶಿಷ್ಯರನ್ನು ಪ್ರೀತಿಸಿದಂತೆ ದೇವರು ನಿಮ್ಮನ್ನು ಪ್ರೀತಿಸುವನು ಎಂಬುದನ್ನು ಜ್ಞಾಪಿಸಿಕೊಳ್ಳಿರಿ. ಯೇಸು ತನ್ನ ಶಿಷ್ಯರಿಗೆ ತನ್ನ ಮರಣ ಮತ್ತು ಪುನರುತ್ಥಾನದ ಬಗ್ಗೆ ಹೇಳಿದಂತೆ ಸುವಾರ್ತೆಗಳ ಶುಭ ವಾರ್ತೆಯನ್ನು ಅದು ಅನ್ವಯಿಸುವ ಎಲ್ಲವನ್ನೂ ಜ್ಞಾಪಿಸಿಕೊಳ್ಳಿರಿ. ನೀವು ಹಿಂದಿರುಗಿ ಬಂದರೆ ದೇವರು ನಿಮ್ಮನ್ನು ಕ್ಷಮಿಸುವನು ಎಂಬುದನ್ನು ಜ್ಞಾಪಿಸಿಕೊಳ್ಳಿರಿ. ಯೇಸು ಹೇಳಿದ ಎಲ್ಲದರಲ್ಲಿಯೂ ಅದು ಒಳಗೊಂಡಿತ್ತು. ಸೋಲುವುದು ಗಂಡಾಂತರ

ಕಾಲಿಯಾದದ್ದಲ್ಲ; ಬೀಳುವುದು, ನಾವು ಬಿಟ್ಟು ಕೊಡದಿದ್ದರೆ, ಅಂತಿಮವಾದದ್ದಲ್ಲ.

**ಮಾನಸಾಂತರಕ್ಕಾಗಿ ಒಂದು ಸಮಯ**

ಎರಡನೆಯದು, ಕೋಳಿ ಕೂಗುವಾಗ, ಅದು ಪರಿವರ್ತನೆಯ ಸಮಯವಾಗಿದೆ. "ಹೊರಗೆ ಹೋಗಿ ಬಹು ವ್ಯಥೆಪಟ್ಟು ಅತ್ತನು" (ವ. 75ಬಿ).

ಯೇಸುವಿಗೆ ವಿರೋಧವಾಗಿ ... ಇಲ್ಲವೇ ಜನರ ನಾಯಕರ ವಿರೋಧವಾಗಿ ... ಇಲ್ಲವೇ ಆರ್ಥಿಕ ವ್ಯವಸ್ಥೆಗೆ ವಿರೋಧವಾಗಿ ... ಇಲ್ಲವೇ ಬೆಸ್ತರು ಹೇಗೆ ನಡಿಸಿಕೊಳ್ಳಲ್ಪಟ್ಟರು ಎಂಬುದಕ್ಕೆ ವಿರೋಧವಾಗಿ ಪೇತ್ರನು ಯಾವುದೇ ದ್ವೇಷ ಇಟ್ಟುಕೊಂಡಿರಲಿಲ್ಲ. ತಾನಿರ ಬೇಕಾದ ರೀತಿಯಲ್ಲಿ ಪೇತ್ರನು ಯಾವುದೇ ದ್ವೇಷ ಇಟ್ಟುಕೊಂಡಿರಲ್ಲಿ. ತಾನಿರಬೇಕಾದ ರೀತಿಯಲ್ಲಿ ಇರುವದರಲ್ಲಿ, ತಾನು ಮಾಡಬೇಕಾದದ್ದನ್ನು ಮಾಡುವದರಲ್ಲಿ ಪೇತ್ರನು ಸೋತು ಹೋದದ್ದಕ್ಕಾಗಿ ಅತನಿಗೆ ದ್ವೇಷವಿತ್ತು.

ಯೂದ ಮತ್ತು ಪೇತ್ರರ ಮಧ್ಯದಲ್ಲಿ ಆಗಾಗ ವಿರುದ್ಧವಾಗಿರುವಂಥದ್ದು ಗಮನಿಸಲ್ಪಟ್ಟಿದೆ. ಯೂದನು ಕರ್ತನನ್ನು ಮಾರಿದ ತರುವಾಯ ಅವನೂ ಸಹ ಪಶ್ಚಾತ್ತಾಪದಿಂದ ತುಂಬಲ್ಪಟ್ಟನು. ಹೀಗಿದ್ದರೂ ಅವನು ಕಣ್ಣೀರು ಸುರಿಸಲಿಲ್ಲ. ಅದರ ಬದಲು ಅವನು ಹೊರಗೆ ಹೋಗಿ ನೇಣು ಹಾಕಿ ಕೊಂಡನು (ಹೋಲಿಸು. ಮತ್ತಾಯ 27:3). ಈ ಲೋಕದ ದುಃಖಪಡುವಿಕೆಗೂ ದೇವರ ಚಿತ್ತಾನುಸಾರವಾದ ದುಃಖಪಡುವಿಕೆಗೂ (2 ಕೊರಿಂಥ. 7:10), ಪಶ್ಚಾತ್ತಾಪಕ್ಕು (remorse) ಮತ್ತು ಮನಃ ಪರಿವರ್ತನೆಗೂ ಮಧ್ಯದಲ್ಲಿ ಭಿನ್ನತೆಯಿರುವುದು.

ಕೋಳಿ ಕೂಗುವಾಗ, ಅದೊಂದು ಸಂತೋಷದ ಸಮಯವಾಗಿರುವದಿಲ್ಲ. ಕೋಳಿ ಯನ್ನು ಸುಮ್ಮನಿರಿಸಲು ಅದರ ಮುಂದೆ ಕಾಳನ್ನು ಚೆಲ್ಲಲು ಶೋಧಿಸಲ್ಪಡ ಬಹುದು. ಅದರ ಕುತ್ತಿಗೆಯನ್ನು ಮುರಿಯಲೂ ನೀವು ಶೋಧಿಸಲ್ಪಡಬಹುದು. ಹೀಗಿದ್ದರೂ ದೇವರ ನಡಿಸುವಿಕೆಯಲ್ಲಿ ಈ "ಕೋಳಿಯ ಕೂಗುಗಳು" ನಮ್ಮನ್ನು ಎಚ್ಚಿಸಲು, ನಮ್ಮ ದಂಗೆಯ ಘೋರ ಕಾರ್ಯವನ್ನು ನೋಡಲು ನಮಗೆ ಸಹಾಯ ಮಾಡಲು ಕೊಡಲ್ಪಡುವವು. ಆದುದರಿಂದ ಕೋಳಿಯು ಕೂಗುವಾಗ ಅದು ನಮ್ಮ ಹೃದಯಗಳನ್ನು ಮುರಿಯ ಬೇಕು. ಮನಃ ಪರಿವರ್ತನೆಯಾಗಿ, "ದೇವರೆ, ನಾವು ಪಾಪಮಾಡಿದ್ದೇವೆ, ನಮ್ಮ ಯೋಚನೆ, ಮಾತು ಮತ್ತು ಕೃತಿಯಲ್ಲಿ ನಿನ್ನನ್ನು ಅಲ್ಲಗಳೆದಿದ್ದೇವೆ. ಆದರೆ ನಿನ್ನ ಸಹಾಯದೊಂದಿಗೆ ನಾವು ಒಳ್ಳೆಯದನ್ನು ಮಾಡಬಲ್ಲೆವು" ಎಂದು ಹೇಳಲು ನಡಿಸಬೇಕು.

**ನವೀಕರಣಕ್ಕಾಗಿ ಒಂದು ಸಮಯ**

ಇದು ನಮ್ಮ ಮೂರನೆಯ ಜ್ಞಾಪಕಕ್ಕೆ ನಮ್ಮನ್ನು ತರುತ್ತದೆ: ಕೋಳಿ ಕೂಗುವಾಗ, ಅದು ನವೀಕರಣಕ್ಕಾಗಿರುವ ಸಮಯವಾಗಿದೆ.

"ಪೇತ್ರನ ಕಣ್ಣೀರು ನಿಜವಾದ ಪರಿವರ್ತನೆಯನ್ನು ಸೂಚಿಸುತ್ತದೆ, ಆದರೆ ಕೇವಲ ಪಶ್ಚಾತಾಪವನ್ನಲ್ಲ ಎಂಬುದನ್ನು ನೀವು ಹೇಗೆ ತಿಳಿಯುವಿರಿ?" ಎಂದು ಕೇಳಬಹುದು. ಉತ್ತರವು ಪೇತ್ರನ ನಂತರದ ಕೃತ್ಯಗಳಲ್ಲಿ ಕಾಣುತ್ತದೆ. ಪೇತ್ರನಿಗೆ ಯೇಸು ಇನ್ನೊಂದು ಅವಕಾಶ ಕೊಟ್ಟನು. ಅವನು ಅದರ ಲಾಭಪಡೆದನು.

ಶಿಷ್ಯರು ಬಿದ್ದು ಹೋಗಿ ಚದರಿ ಹೋಗುವರೆಂದು ಯೇಸು ಅವರಿಗೆ ಹೇಳಿದಾಗ, ತಾನು ಸತ್ತವರೊಳಗಿಂದ ಎದ್ದು ಬಂದು ಗಲಿಲಾಯದಲ್ಲಿ ಅವರನ್ನು ಸಂದರ್ಶಿಸುವನೆಂದು

ಕೂಡ ಹೇಳಿದನು (ಮತ್ತಾಯ 26:31, 32). ಯೇಸು ಸತ್ತವರೊಳಗಿಂದ ಎದ್ದು ಬಂದ ತರುವಾಯ, ಖಾಲಿಯಾದ ಸಮಾಧಿಯ ಬಳಿಯಲ್ಲಿ ದೇವದೂತನು ಸ್ತ್ರೀಯರಿಗೆ ಹೀಗೆ ಹೇಳಿದನು, "ಬೇಗ ಹೋಗಿ ಆತನ ಶಿಷ್ಯರಿಗೆ - ಸತ್ತವನು ಬದುಕಿದ್ದಾನೆ, ಆತನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ. ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ" (ಮತ್ತಾಯ 28:7). ಗಲಿಲಾಯ ಸಮುದ್ರದ ಬಳಿಯಲ್ಲಿ ಯೇಸು ಶಿಷ್ಯರೊಂದಿಗೆ ಸಂದರ್ಶನ ಕೊಟ್ಟಿದ್ದನ್ನು - ಯೇಸುವಿನಿಂದ ಗಂಭೀರವಾದ ಪ್ರಶ್ನೆಗಳನ್ನು ಕೇಳುವುದರೊಂದಿಗೆ ಪೇತ್ರನೊಂದಿಗಿನ ಯೇಸುವಿನ ಸಂಭಾಷಣೆಯನ್ನು ಕುರಿತು ಯೋಹಾನ 21 ಹೇಳುತ್ತದೆ:

> ಯೇಸು ಸೀಮೋನ ಪೇತ್ರನನ್ನು - ಯೋಹಾನನ ಮಗನಾದ ಸೀಮೋನನೇ, ನೀನು ಇವರಿಗಿಂತ - ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ ಎಂದು ಕೇಳಲು (ಯೇಸು ಬಹುಶಃ ದೋಣಿಗಳನ್ನೂ ಬಲೆಗಳನ್ನೂ ಹಾಗೂ ಮೀನುಗಳನ್ನೂ ಸೂಚಿ ಸಿದ್ದರ ಬಹುದು), ಅವನು - ಹೌದು, ಕರ್ತನೇ, ನಿನ್ನ ಮೇಲೆ ಮಮತೆ - ಇಟ್ಟಿದ್ದೇನೆಂಬುದನ್ನು ನೀನೇ ಬಲ್ಲೆ ಅಂದನು. ಆತನು ಅವನಿಗೆ - ನನ್ನ ಕುರಿಮರಿಗಳನ್ನು ಮೇಯಿಸು ಎಂದು ಹೇಳಿದನು. ಆತನು ತಿರಿಗಿ ಎರಡನೆಯ ಸಾರಿ ಅವನನ್ನು - ಯೋಹಾನನ ಮಗನಾದ ಸೀಮೋನನನೇ, ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ ಎಂದು ಕೇಳಲು ಅವನು - ಹೌದು, ಕರ್ತನೇ, ನಿನ್ನ ಮೇಲೆ ಮಮತೆ ಇಟ್ಟಿದ್ದೇನೆಂಬದನ್ನು ನೀನೇ ಬಲ್ಲೆ ಅಂದನು. ಆತನು ಅವನಿಗೆ - ನನ್ನ ಕುರಿಗಳನ್ನು ಕಾಯಿ ಎಂದು ಹೇಳಿದನು. ಆತನು ಮೂರನೆಯ ಸಾರಿ - ಯೋಹಾನನ ಮಗನಾದ ಸೀಮೋನನನೇ, ನನ್ನ ಮೇಲೆ ಮಮತೆ ಇಟ್ಟಿದ್ದೀಯೋ ಎಂದು ಕೇಳಿದನು. ಮೂರನೆಯ ಸಾರಿ ಆತನು - ನನ್ನ ಮೇಲೆ ಮಮತೆ ಇಟ್ಟಿದ್ದೀಯೋ ಎಂದು ತನ್ನನ್ನು ಕೇಳಿದ್ದಕ್ಕೆ ಪೇತ್ರನು ದುಃಖಪಟ್ಟು - ಕರ್ತನೇ, ನೀನು ಎಲ್ಲಾ ಬಲ್ಲೆ; ನಿನ್ನ ಮೇಲೆ ನಾನು ಮಮತೆ ಇಟ್ಟಿದ್ದೇನೆಂಬುದು ನಿನಗೆ ತಿಳಿದಿದೆ ಅಂದನು. ಅವನಿಗೆ ಯೇಸು - ನನ್ನ ಕುರಿಗಳನ್ನು ಮೇಯಿಸು ಎಂದು ಹೇಳಿದನು (ಯೋಹಾನ 21:15-17).

ಪೇತ್ರನು ಮೂರು ಸಲ ಅಲ್ಲಗಳೆದಿದ್ದನು. ಪ್ರತಿಯೊಂದಕ್ಕೆ ಯೇಸುವು ಪೇತ್ರನ ಪ್ರೀತಿಯ ಒಪ್ಪಿಕೊಳ್ಳುವಿಕೆಗಾಗಿ ಕರೆದನು.

ಪೇತ್ರನು ಇನ್ನೂ ಕೆಲಸ ಮಾಡಲು ಯೇಸುವಿನ ಹತ್ತಿರ ಕೆಲಸ ಇತ್ತು ಎಂಬುದನ್ನು ಗಮನಿಸಲು ವಿಶೇಷವಾಗಿ ಬಯಸುತ್ತೇನೆ. "ನನ್ನ ಕುರಿಗಳನ್ನು ಮೇಯಿಸು" ಎಂದು ಯೇಸು ಮೂರು ಸಲ ಹೇಳಿದನು. ಪೇತ್ರನು ಭಯಂಕರವಾಗಿ ಪಾಪ ಮಾಡಿದ್ದನು. ಆದರೆ ಪೇತ್ರನೊಂದಿಗೆ ಮುಕ್ತಾಯವಾಗಿರಲಿಲ್ಲ. "ಕರ್ತನ ಎರಡನೆಯ ಅವಕಾಶದೊಂದಿಗೆ" ಅವನು ಮುಖಾ ಮುಖಿಯಾಗಿ ನಿಂತಿದ್ದನು.

ಪೇತ್ರನು ಆ ಕೃಪಾಪೂರ್ಣವಾದ ಅವಕಾಶದ ಲಾಭ ತೆಗೆದು ಕೊಂಡನು. ಅಪೊಸ್ತಲರ ಕೃತ್ಯ 2ರಲ್ಲಿ ಪೇತ್ರನು ಪಂಚಾಶತ್ತಮ ಹಬ್ಬದ ದಿನದಂದು ನಿಂತುಕೊಂಡು ಧೈರ್ಯದಿಂದ ಯೇಸುವು ಕ್ರಿಸ್ತನೆಂದು ಘೋಷಿಸುವದನ್ನು ನಾವು ನೋಡುತ್ತೇವೆ. ಅ. ಕೃ. 10ರಲ್ಲಿ ಕೊರ್ನೇಲ್ಯನಿಗೂ ಅವನ ಮನೆಯವರಿಗೂ ಪ್ರಸಂಗಿಸಲು ಕೈಸರಯದಲ್ಲಿ ಒಂದು ಮನೆಯೊಳಗೆ ಅವನು ಹೋಗುವದನ್ನು ನೋಡುತ್ತೇವೆ.

ಕೋಳಿ ಕೂಗುವಾಗ, ನಾವು ಬಯಸದಿದ್ದರೆ, ಅದು ಅಂತ್ಯವಾಗುವದಿಲ್ಲ. ಸಾಕರಾತ್ಮಕವಾದ ರೀತಿಯಲ್ಲಿ ನಾವು ಅದಕ್ಕೆ ಉತ್ತರ ಕೊಟ್ಟರೆ ಅದು ಕೇವಲ ಪ್ರಾರಂಭ

ವಾಗಬಹುದು. ಪೇತ್ರನು ಅನುಭವದೊಳಗಿಂದ ಹೆಚ್ಚು ಬಲಶಾಲಿಯಾಗಿ, ಬುದ್ಧಿವಂತ - ಮನುಷ್ಯನಾಗಿ ಹಾಗೂ ಒಡೆಯನಿಗೆ ಹೆಚ್ಚು ಪ್ರಯೋಜನ ಕಾರಿಯಾದವನಾಗಿ ಬಂದನು. ಒಂದು ಹಳೆದಂತ ಕಥೆಯಿದೆ, ತನ್ನ ಜೀವಿತದ ಅನಂತರದ ಭಾಗದಲ್ಲಿ ಕೋಳಿಯು ಕೂಗುವದನ್ನು ಪೇತ್ರನು ಕೇಳಿಸಿಕೊಳ್ಳುವಾಗ, ಅವನು ಪ್ರಸಂಗ ಮಾಡುತ್ತಿದ್ದರೆ ಮಧ್ಯದಲ್ಲಿ ನಿಲ್ಲಿಸುವನು. ಅವನ ಮುಖ ಕೆಂಪಗಾಗುವುದು. ಆದರೆ ಆಮೇಲೆ ಅವನು ಮೊದಲಿಗಿಂತ ಹೆಚ್ಚು ಆಸಕ್ತಿಯಿಂದಲೂ ಧೈರ್ಯದಿಂದಲೂ ಹಾಗೆಯೇ ಹೆಚ್ಚು ಪ್ರೀತಿಯಿಂದಲೂ ತಿಳುವಳಿಕೆಯಿಂದಲೂ ಪ್ರಸಂಗವನ್ನು ಮುಂದುವರಿಸುವನು.

ಒಂದು ತಪ್ಪು, ಒಂದು ಘೋರವಾದ ತಪ್ಪು ನಿನ್ನ ಜೀವಿತವನ್ನು ನಾಶ ಮಾಡುವಂತೆ ಇಲ್ಲವೇ ನೀನಾಗಬೇಕೆಂದು ದೇವರು ಬಯಸಿದ್ದಕ್ಕಿಂದ ಕಡಿಮೆಯಾದವನಾಗುವಂತೆ ಮಾಡಲು ಬಿಡಬೇಡ. ಕೋಳಿ ಕೂಗುವಾಗ, ಅದು ಎಚ್ಚರಗೊಳ್ಳುವ ಸಮಯವಾಗಿದೆ! ಅದು ನವೀಕರಣಕ್ಕಾಗಿರುವ ಸಮಯವಾಗಿದೆ.

## ಮುಕ್ತಾಯ

ನಾವು ಸುಲಭವಾಗಿ ತಪ್ಪಿಸಿಕೊಳ್ಳಬಹುದಾದ ಒಂದು ಮಹತ್ವದ ಪಾಠವು ಈ ಕಥೆಗಿರುವುದು. ಪ್ರತಿಯೊಬ್ಬ ಸುವಾರ್ತಾ ಬರಹಗಾರನೂ ಪೇತ್ರನ ಬೀಳುವಿಕೆಯ ಬಗ್ಗೆ ಹೇಳಿರುವನು. ಮಾರ್ಕನ ಸುವಾರ್ತೆಯು ಮೊದಲು ಬರೆಯಲ್ಪಟ್ಟಿತೆಂದು ಅನೇಕ ಪಂಡಿತರು ಒಪ್ಪಿಕೊಳ್ಳುವರು. ಹೀಗೆ ಅದು ಈ ಕಥೆಯನ್ನು ಚಲಾವಣೆಯಲ್ಲಿ ತರುವದರಲ್ಲಿ ಮೊದಲನೆಯದಾಗಿದೆ. ನಿಜವಾಗಿಯೂ ಪೇತ್ರನು ಹೇಳಿದ ಯೇಸುವಿನ ವಿಷಯವು ಮಾರ್ಕನ ಸುವಾರ್ತೆಯಾಗಿದೆ ಎಂದು ಅನೇಕರು ತಿಳಿದುಕೊಳ್ಳುತ್ತಾರೆ. ಮಾರ್ಕನ ಸುವಾರ್ತೆಯು ಪೇತ್ರನ ಪ್ರಸಂಗದ ವಿಷಯವು ಬರೆಯಲ್ಪಟ್ಟಿದ್ದಾಗಿದೆಯೇ ಹೊರತು ಬೇರೇನೂ ಅಲ್ಲ ಎಂದು ಪಪಿಯಾಸ ಹೇಳಿದ್ದಾನೆ. ಪೇತ್ರನ ಮಹಾ ಪಾಪವನ್ನು ಬಹಿರಂಗ ಪಡಿಸುವದರಲ್ಲಿ ಮೊದಲನೆಯವನು ಪೇತ್ರನು ತಾನೇ ಎಂದು ಇನ್ನೊಂದು ರೀತಿಯಲ್ಲಿ ಹೇಳಬಹುದು.

"ನಿಮಗೆ ಅದರಿಂದ ಲಾಭವಾಗುವಂತೆ - ನಾನು ನನಗೆ ಏನು ಸಂಭವಿಸಿತೆಂಬುದನ್ನು ಹಂಚಿಕೊಳ್ಳಲು ಬಯಸುತ್ತೇನೆ. ಈ ಪಾಠವನ್ನು ಕಲಿಯಿರಿ: ಮೊದಲನೆಯದು, ಯಾರಾದರೂ ಬಿದ್ದು ಹೋಗಬಹುದು. ನಾನು ಬೀಳಬಹುದೆಂದು ಯೋಚಿಸಿರಲಿಲ್ಲ. ಆದರೆ ನಾನು ಬಿದ್ದುಹೋದೆನು. ಹಾಗೆಯೇ ನೀವು ಬೀಳಬಹುದು. ಎರಡನೆಯದು, ನೀವು ಬಿಳುವಾಗ, ಅದು ಅಂತ್ಯವಲ್ಲ, ಕರ್ತನು ಕೃಪೆಯುಳ್ಳವನೂ ದಯೆಯುಳ್ಳವನೂ ಆಗಿದ್ದಾನೆ. ಆತನು ನಿಮಗೆ ಎರಡನೆಯ ಅವಕಾಶ ಕೊಡುವನು. ನೀವು ಹಿಂದಿರುಗಬಹುದು" ಎಂದು ಪೇತ್ರನು ಹೇಳುವಂತೆ ಇದೆ.

ಯಾರೊಬ್ಬರಿಗಾದರೂ ಈ ಪಾಠವು ಕೋಳಿ ಕೂಗುವಂಥದ್ದು ಆಗಬೇಕೆಂದು ಬಯಸುತ್ತೇನೆ. ಒಬ್ಬನಾದರೂ ತನಗೆ ಸಂಭವಿಸಿದ್ದನ್ನು ಎದುರಿಸುವಂತೆ ಮಾಡುವುದು, ಮನದಲ್ಲಿ ಪರಿವರ್ತನೆ ಹುಟ್ಟಿಸುವುದು, ಹಾಗೂ ಅವನು ಹಿಂದಿರುಗುವಂತೆ ಮಾಡುವುದೆಂದು ನೆನಸುತ್ತೇನೆ.

ಸೈತಾನನಿಗೆ ಎರಡು ಮೆಚ್ಚಿಕೆಯ ಸುಳ್ಳುಗಳಿವೆ. ನೀವು ಉತ್ತರಿಸಬೇಕಾದ ಅವಶ್ಯಕತೆಯಿದ್ದರೆ, "ಇದು ಬಹಳ ಬೇಗ, ಇದು ಬಹಳ ಬೇಗವಾಗುತ್ತದೆ. ಕರ್ತನಿಗೆ ವಿಧೇಯನಾಗಲು ಅವಸರಮಾಡುವ ಅಗತ್ಯತೆಯಿಲ್ಲ" ಎಂದು ಅವನು ಹೇಳುತ್ತಾ ಹೋಗುವನು. ನೀವು ಘೋರವಾದ ಪಾಪಮಾಡಿದ ಮೇಲೆ ಎರಡನೆಯ ಸುಳ್ಳು "ಇದು

ಬಹಳ ತಡವಾಯಿತು, ಬಹಳ ತಡವಾಯಿತು. ನೀನು ಬಹಳ ದೂರ ಹೋಗಿರುವಿ" ಎಂದಿರುವುದು. ಸುಳ್ಳುಗಳ ತಂದೆಯನ್ನು ನಂಬಬೇಡಿರಿ! ಕರ್ತನಿಗೆ ನಿಮ್ಮ ಹೃದಯವನ್ನು ಕೊಡುವುದು ಎಂದೂ ಬೇಗನೇ ಆಗುವಿದಿಲ್ಲ. ಹಾಗೂ ನಿಮ್ಮ ಹೃದಯವನ್ನು ಸ್ಪರ್ಶಿಸ ಬೇಕಾದರೆ, ಅತನ ಬಳಿಗೆ ಹಿಂದಿರುಗುವುದು ಎಂದೂ ತಡವಾಗುವದಿಲ್ಲ.

ಪೇತ್ರನು ಪಾಪ ಮಾಡಿದಾಗ, ಕರ್ತನು ನಿಂತುಕೊಂಡು ಅವನ ಕಡೆಗೆ ನೋಡಿ ದನು. ಈಗ ಕರ್ತನು ನಿನ್ನ ಕಡೆಗೆ ನೋಡುತ್ತಿರುವನು. ಅದು ಯಾವ ರೀತಿಯ ನೋಟವಾಗಿರುವುದು? ಸಂತೋಷದ ನೋಟವೋ? ನಿರಾಶೆಯ ನೋಟವೋ? ಅದು ಯಾವುದೋ ಆಗಿದ್ದರೂ, ಅದು ಪ್ರೀತಿಯ, ಕರುಣೆಯ ನೋಟವಾಗಿರುವದೆಂಬ ಭರವಸೆ ನನಗಿದೆ.

ಕ್ರಿಸ್ತನಲ್ಲಿ ನೀವು ಬಾಪ್ತಿಸ್ಮ ಹೊಂದಬೇಕಾಗಿದ್ದರೆ ಇಲ್ಲವೇ ಕರ್ತನೊಂದಿಗೆ ಸಂಧಾನವಾಗ ಬೇಕೆಂದಿದ್ದರೆ ನಿಮ್ಮ ಹೃದಯಕ್ಕೆ ಮುಟ್ಟುವಂತೆ ನೀವು ಬಿಡುವಿರೋ?

---

ಟಿಪ್ಪಣೆಗಳು

[1]ನನ್ನ ಸ್ನೇಹಿತರಲ್ಲಿ ಒಬ್ಬರಾದ ಚೆಸ್ಟರ್ ಡೇವಿಸ್ ಎಂಬವರು, ಹುಂಜಗಳು ಹೀಗೆ ತಮ್ಮ ಕ್ಷೇತ್ರವನ್ನು ಗುರುತಿಸುತ್ತವೆ - ಕೂಗುವುದು ಪ್ರತಿಭಟನೆಯ ಸಂಜ್ಞೆಯಾಗಿದೆ ಎಂದು ಸೂಚಿಸುತ್ತಾರೆ. [2]KJVಯಲ್ಲಿ "ಎಡವಿ ಬೀಳು" ಎಂದು ಈ ವಚನದಲ್ಲಿದೆ. [3]ವಿಚಾರಣೆಯ ಸಮಯದಲ್ಲಿ ಯೋಹಾನನು ಎಲ್ಲಿದ್ದನೆಂಬುದು ನಮಗೆ ತಿಳಿದಿಲ್ಲ. ವಿಚಾರಣೆಯನ್ನು ಗಮನಿಸಲು ಅವರು ಅವನನ್ನು ಒಳಗೆ ಬಿಟ್ಟಿರಬೇಕು. [4]ಪೇತ್ರನು "ದ್ವಾರಮಂಟಪ" (porch) ಎಂಬ ಸ್ಥಳಕ್ಕೆ ಹೋದನೆಂದು KJV ಸೂಚಿಸುತ್ತದೆ.

© 2009 Truth for Today